

ಕೃಷ್ಣನ ನಾಡಿನಲ್ಲಿ ಸೇವಾಯೋಗ

# ಬೃಂದಾವನ ಸೇವಾಶ್ರಮ

ಎನ್. ಪ್ರಭಾಕರ್

ರಾಮಕೃಷ್ಣ ಮಹಾಸಂಘದ ವೈದ್ಯಕೀಯ ಸೇವಾಕೇಂದ್ರಗಳಲ್ಲಿ ಬೃಂದಾವನ ಸೇವಾಶ್ರಮವು ತನ್ನದೇ ಆದ ಮಹತ್ವವನ್ನು ಪಡೆದಿದೆ. ಶ್ರೀಕೃಷ್ಣನ ಜನ್ಮಭೂಮಿಯಲ್ಲಿ, ಆತನೇ ಬೋಧಿಸಿದ ನಿಸ್ವಾರ್ಥ ಕರ್ಮಯೋಗದ ಉತ್ತಮ ಕಾರ್ಯಾಗಾರ ಇದಾಗಿದೆ.

ಈ ಪುಣ್ಯಸಂಸ್ಥೆ ಬೆಳೆದುಬಂದ ಪಾವನ ಹಾಗೂ ರೋಚಕ ಕಥೆಯನ್ನು ವಿವರಿಸಿರುವ ಶ್ರೀಯುತರು ಭಾರತೀಯ ಜೀವವಿಮಾ ನಿಗಮ ಸಂಸ್ಥೆಯ ನಿವೃತ್ತ ಅಧಿಕಾರಿಗಳಾಗಿದ್ದರು. ಹಲವಾರು ಅನುವಾದ ಕಾರ್ಯಗಳಲ್ಲಿ ನಿರತರಾಗಿದ್ದ ಇವರು ಇತ್ತೀಚಿಗೆ ಹಠಾತ್ತನೆ ನಿಧನ ಹೊಂದಿದರು. ಇದು ವಿವೇಕಪ್ರಭಕ್ಕೆ ಅವರ ಚೊಚ್ಚಲ ಹಾಗೂ ಕಡೆಯ ಮೂಲ ಲೇಖನ. ಇದರ ಪ್ರಕಟಣೆಯ ಮೂಲಕ ವಿವೇಕಪ್ರಭವು ಮೃತರ ಆತ್ಮಕ್ಕೆ ಶಾಂತಿ ಕೋರುತ್ತಿದೆ.

ಬೃಂದಾವನ ಎಂಬ ಹೆಸರು ಕೇಳಿದರೆ ಸಾಕು, ಸಾವಿರಾರು ಹಿಂದುಗಳಿಗೆ ಮೈನವಿರೇಳುತ್ತದೆ. ಅದರಲ್ಲೂ ವೈಷ್ಣವ ಸಂಪ್ರದಾಯದವರಿಗೆ ಭಾವತುಂಬಿ ಆನಂದಾಶ್ರುಗಳು ಹೊರಸೂಸುತ್ತವೆ. ಎಷ್ಟಾದರೂ ಆ ಪುಣ್ಯಸ್ಥಳ ಬಾಲಕೃಷ್ಣನು ತನ್ನ ಲೀಲೆಯಾಡಿದ ಸ್ಥಳ! ಕಂಸಪ್ರೇರಿತ ಪೂತನಿ, ವೃಷಭಾಸುರ, ಕೇಶಿದಾನವರನ್ನು ಯಮಸದನಕ್ಕೆ ಅಟ್ಟಿ ಲೋಕೋಪಕಾರ ಮಾಡಿದ ಮಹಾ ಮಹಿಮನ ಕೇವಲ ಸ್ಮರಣೆಮಾತ್ರವೇ ಹೃದಯದಲ್ಲಿ ಭಕ್ತಿ, ಗೌರವ ಹಾಗೂ ಧನ್ಯತಾ ಭಾವನೆಗಳನ್ನು ಮೂಡಿಸುವುದು. ಬೃಂದಾವನದ ಮಣ್ಣಿನ ಕಣಕಣವೂ ಪವಿತ್ರವೆಂದು ಭಾವಿಸುವ ಭಕ್ತರು ಈಗಲೂ ಸಹಸ್ರಾರು ಸಂಖ್ಯೆಯಲ್ಲಿ ಬಂದು, ಭಕ್ತಿಭಾವದಲ್ಲಿ ಮಿಂದು, ತಮ್ಮ ಜೀವನ ಧನ್ಯ ಎಂದು ಎಣಿಸುತ್ತಾರೆ. ಮತ್ತೆ ಕೆಲವರು ವೃದ್ಧಾಪ್ಯ ದೆಸೆಯಿಂದ ಅಲ್ಲಿಯೇ ನೆಲೆಸಿ, ಅಲ್ಲಿ ಮರಣ ಹೊಂದಿದರೆ ಪುಣ್ಯಲೋಕಗಳು ಪ್ರಾಪ್ತವಾಗುವುದೆಂದೂ, ಭವಸಾಗರದಿಂದ ಪಾರಾಗುವೆವು ಎಂದೂ ಭಾವಿಸಿ ಅಲ್ಲಿಯೇ ತಮ್ಮ ಉಳಿದ ಜೀವನವನ್ನು ಕಳೆಯುತ್ತಾರೆ.

ಬೃಂದಾವನ (ವೃಂದಾವನ) ಎಂದರೆ ವನಗಳ ಸಮೂಹ. ನಿಧುವನ, ಮಧುವನ ಮುಂತಾದ ಅನೇಕ ವನಗಳ ಸಮೂಹವೇ ಬೃಂದಾವನ. ಇಂತಹ ಮಹಿಮೆಯುಳ್ಳ ಬೃಂದಾವನದ ಇತಿಹಾಸವನ್ನು ಕೊಂಚ ಪರಿಶೀಲಿಸೋಣ. ರಾಮಾಯಣದಲ್ಲಿ ವ್ರಜಮಂಡಲದ ವಿವರಣೆ ಇದೆ. ಹಿಂದೆ ಕೃತಯುಗದಲ್ಲಿ ಮಧುವೆಂಬ ಬಲಾಢ್ಯನಾದ ಮಹಾಸುರನಿದ್ದನು. ಅವನು ಶರಣು ಬಂದವರಿಗೆ ರಕ್ಷಕನೂ, ದೇವತೆಗಳೊಡನೆ ಸ್ನೇಹಪರನೂ ಆಗಿದ್ದನು. ಈ ಮಧುವು ಶಿವನನ್ನು ಕುರಿತು ತಪಸ್ಸು ಮಾಡಿ, ಅವನನ್ನು ಮೆಚ್ಚಿಸಿ, ವರಪಡೆದುಕೊಂಡನು. ಶಿವನು ತನ್ನ ತ್ರಿಶೂಲದಿಂದ ಮತ್ತೊಂದು ಶೂಲವನ್ನು ಸೆಳೆದು, ಅದಕ್ಕೆ ಶಕ್ತಿ ತುಂಬಿ ಅದನ್ನು ಮಧುವಿಗೆ ಕೊಟ್ಟು, "ಮಹಾಶಕ್ತಿಶಾಲಿಯಾದ ಈ ಶೂಲವು, ದೇವತೆಗಳೊಡನೆ ವೈರತ್ವ ಬೆಳೆಸಿದರೆ ಅದೃಶ್ಯವಾಗುವುದು. ಧರ್ಮಾಚರಣೆಯಲ್ಲಿ ಇರುವವರೆಗೂ ನಿನ್ನಲ್ಲಿರುವುದು" ಎಂದು ಹೇಳಿದನು.

ಮಧುವಿಗೆ ಲವಣನೆಂಬ ಪುತ್ರನು ಜನಿಸಿದನು. ಈ ಲವಣನು ಹುಟ್ಟಿನಿಂದಲೇ ಕ್ರೂರ, ದುಷ್ಟನಾಗಿದ್ದನು; ಯಾವಾಗಲೂ ಪಾಪಕರ್ಮವನ್ನೇ ಮಾಡುತ್ತಿದ್ದನು. ತಂದೆಯ ಮಾತಿಗೆ ಗೌರವ ಕೊಡದೇ ಸ್ವೇಚ್ಛೆಯಿಂದ ಪಾಪಾಚರಣೆಯಲ್ಲಿ ತೊಡಗಿರುತ್ತಿದ್ದನು. ಮಧುವು ತಾಪದಿಂದ ಬೆಂದು, ಮಗನ ಕೃತ್ಯಗಳಿಂದ ಬೇಸತ್ತು ವರುಣಲೋಕಕ್ಕೆ ಹೊರಟುಹೋದನು. ಹೋಗುವಾಗ

ಈ ಶೂಲವನ್ನು ಅವನಿಗೆ ಕೊಟ್ಟು ಅದರ ಮಹಿಮೆಯನ್ನು ತಿಳಿಸಿದನು. ಶೂಲದ ಮಹಿಮೆಯಿಂದ ಲವಣಾಸುರನು ದೊಡ್ಡ ಲೋಕಕಂಟಕನಾದನು. ತಾಪಸರು, ಮುನಿಗಳು, ಋಷಿಗಳು ಇವನ ತಂಟೆ ತಾಳಲಾರದೆ ಶ್ರೀರಾಮಚಂದ್ರನಿಗೆ ಅವನನ್ನು ನಿಗ್ರಹಿಸಲು ಅರಿಕೆ ಮಾಡಿಕೊಂಡರು. ಶ್ರೀರಾಮಚಂದ್ರನು, ಶತ್ರುಘ್ನನನ್ನು ಕಳುಹಿಸಿ ಲವಣಾಸುರನನ್ನು ವಧೆ ಮಾಡಿಸಿದನು. ಶತ್ರುಘ್ನನು ಮಧುಪುರಿಯನ್ನು ಪುನರ್ನಿರ್ಮಾಣ ಮಾಡಿ 'ಮಧುರಾಪುರ' ಎಂದು ಹೆಸರಿಟ್ಟನು. ಮುಂದೆ ಇದೇ ಮಥುರಾ ನಗರ ಎನ್ನಿಸಿಕೊಂಡಿತು.

ಭಾಗವತದಲ್ಲಿ ಪಾಂಡವರು ಮಹಾಪ್ರಸ್ಥಾನಕ್ಕೆ ಹೊರಡುವಾಗ, ಈ ವ್ರಜಮಂಡಲಕ್ಕೆ, ವಜ್ರನಾಭನನ್ನು (ಶ್ರೀಕೃಷ್ಣನ ಮರಿಮಗ) ರಾಜನನ್ನಾಗಿ ಮಾಡಿದುದರ ಉಲ್ಲೇಖವಿದೆ. ಈ ವ್ರಜಮಂಡಲವು ಮುಂದೆ ಏನಾಯಿತು ಎಂಬುದಕ್ಕೆ ಪುರಾವೆಗಳು ಇಲ್ಲ. ಕ್ರಿ.ಶ. ೧೦೧೮ರಲ್ಲಿ ಘಜನಿ ಮಹಮ್ಮದನು ಮಥುರಾ ಪ್ರದೇಶಕ್ಕೆ ಧಾಳಿ ಮಾಡಿ ಎಲ್ಲವನ್ನೂ ಹಾಳುಗೆಡವಿದನು. ಅನೇಕ ಶತಮಾನ ಗಳವರೆಗೆ ಈ ಪ್ರದೇಶವು ಜನರಹಿತವಾಗಿತ್ತು, ಅಲ್ಲಿ ಇದ್ದ ಎಲ್ಲಾ ದೇವಾಲಯಗಳೂ ನಾಶವಾಗಿಹೋಗಿದ್ದವು.

ನಂತರ ೧೫೧೮ರಲ್ಲಿ ಶ್ರೀ ಚೈತನ್ಯ ಪ್ರಭುವು ಬೃಂದಾವನಕ್ಕೆ ಭೇಟಿಕೊಟ್ಟು, ಅದರಲ್ಲಿರುವ ಮಹಿಮಾಸ್ಥಳಗಳನ್ನು ಗುರುತಿಸಿ ಪುನಃ ವ್ರಜಮಂಡಲವನ್ನು ಪೂರ್ವದ ವೈಭವಕ್ಕೆ ತರಲು ಪ್ರಯತ್ನಿಸಿದನು. ಮಥುರಾ ನಗರದ ಸುತ್ತಲೂ ೮೪ ಮೈಲಿ ಸುತ್ತಳತೆ ಇರುವ ಪ್ರದೇಶವೇ 'ವ್ರಜಮಂಡಲ'ವೆನಿಸಿಕೊಳ್ಳುತ್ತದೆ. ವ್ರಜಮಂಡಲದಲ್ಲಿ ೧೨ ಗ್ರಾಮಗಳಿದ್ದು ಅದನ್ನು ವನ ಅಥವಾ ಅರಣ್ಯ ಎಂದು ಕರೆಯುತ್ತಾರೆ. ಈ ಎಲ್ಲ ವನಗಳು ಶ್ರೀಕೃಷ್ಣನ ಲೀಲಾಭೂಮಿಯಾಗಿತ್ತು. ಆದರೆ ಅವುಗಳಲ್ಲಿ ಪ್ರಧಾನವಾದುದು ಬೃಂದಾವನ. ವ್ರಜಧಾಮದಲ್ಲಿ ಶ್ರೀಕೃಷ್ಣನ ದಿವ್ಯಲೀಲೆಯ ಕುರುಹಾಗಿ ಅನೇಕ ದೇವಾಲಯಗಳಿವೆ. ಅವುಗಳಲ್ಲಿ ಮುಖ್ಯವಾದವು ಗೋವಿಂದಜಿ, ಮದನಮೋಹನ, ರಾಧಾರಮಣ, ನಿಧುವನ, ಬಂಕಿ ಬಿಹಾರಿ ಮುಂತಾದವು.

ಎಷ್ಟೋ ವರ್ಷಗಳು ಗತಿಸಿದ ಮೇಲೆ ಶ್ರೀರಾಮಕೃಷ್ಣರು ಶ್ರೀಮಾತೆ ಶಾರದಾದೇವಿಯವರು ಹಾಗೂ ಶ್ರೀರಾಮಕೃಷ್ಣರ ಸಾಕ್ಷಾತ್ ಶಿಷ್ಯರಾದ ಸ್ವಾಮಿ ವಿವೇಕಾನಂದರು, ಸ್ವಾಮಿ ಬ್ರಹ್ಮಾ ನಂದರು, ಸ್ವಾಮಿ ಯೋಗಾನಂದರು, ಸ್ವಾಮಿ ಅಭೇದಾನಂದರು, ಸ್ವಾಮಿ ತುರೀಯಾನಂದರು, ಸ್ವಾಮಿ ಸುಬೋಧಾನಂದರು ಮತ್ತಿತರರು ಇಲ್ಲಿಗೆ ಬಂದು ಸಾಧನೆ ಮಾಡಿದ ದಾಖಲೆಗಳಿವೆ.

**ಬೃಂದಾವನದ ಹೀನಸ್ಥಿತಿ:** ೧೯ನೇ ಶತಮಾನದ ಅಂತ್ಯ ಮತ್ತು ೨೦ನೇ ಶತಮಾನದ ಆದಿಯಲ್ಲಿ ಬೃಂದಾವನದ ಸ್ಥಿತಿ ಹೇಗಿತ್ತು ಎಂದು ನೋಡೋಣ. ಆಗ ಬೃಂದಾವನವು ವೈಷ್ಣವ ಸಾಧುಗಳ, ಭಕ್ತರ ಆಕರ್ಷಣೀಯ ಸ್ಥಳವಾಗಿತ್ತು. ಭಾರತದ ಎಲ್ಲ ಕಡೆಯಿಂದ ಯಾತ್ರಿಗಳು ಬೃಂದಾವನಕ್ಕೆ ಬರುತ್ತಿದ್ದರು. ಅಲ್ಲಿನ ಧರ್ಮಶಾಲೆಗಳಲ್ಲಿ, ದೇವಾಲಯಗಳಲ್ಲಿ ತಂಗಿ ತಮ್ಮ ಆಧ್ಯಾತ್ಮಿಕ ಸಾಧನೆಯನ್ನು ಮುಂದುವರೆಸುತ್ತಿದ್ದರು. ಕೆಲವರು ಅಲ್ಲಿಯೇ ಉಳಿಯುತ್ತಿದ್ದರು. ಜನಜಂಗುಳಿಯ ಕಾರಣದಿಂದ ನೈರ್ಮಲ್ಯ, ಶುಚಿತ್ವಗಳಿಲ್ಲದೆ ನಾನಾವಿಧವಾದ ಸಾಂಕ್ರಾಮಿಕ ರೋಗಗಳು ಬಹುಬೇಗ ಹರಡುತ್ತಿದ್ದವು. ರೋಗಪೀಡಿತರಾದ ಜನರಿಗೆ ಸರಿಯಾದ ಔಷಧ, ಉಪಚಾರಗಳು ಲಭ್ಯವಿರಲಿಲ್ಲ. ಕೆಲವು ಯಾತ್ರಿಗಳು ತಮ್ಮೊಡನೆ ಬಂದಿದ್ದ ಇತರ ಯಾತ್ರಿಗಳು ರೋಗ ಪೀಡಿತರಾದರೆ ಅವರನ್ನು ಅಲ್ಲಿಯೇ ಬಿಟ್ಟು ಹೋಗುತ್ತಿದ್ದರು. ಧರ್ಮಶಾಲೆಗಳಲ್ಲಿ ಯಾರಾದರೂ ರೋಗಪೀಡಿತರಿದ್ದರೆ ನಿರ್ದಾಕ್ಷಿಣ್ಯವಾಗಿ ಅವರನ್ನು ಹೊರಹಾಕುತ್ತಿದ್ದರು. ಇಂತಹವರ ಪಾಡು ಬಹಳ ಶೋಚನೀಯವಾಗಿತ್ತು. ಅವರು ರಸ್ತೆಗಳಲ್ಲಿಯೇ ಪ್ರಾಣತ್ಯಾಗ ಮಾಡುತ್ತಿದ್ದರು. ಇಂಥವರ ಉಪಚಾರಕ್ಕೆ ಸರ್ಕಾರ ದಿಂದ ಬರುತ್ತಿದ್ದ ನೆರವು ಅತ್ಯಲ್ಪವಾಗಿತ್ತು.

**ಆಶಾಕಿರಣದ ಉದಯ :** ಪರಿಸ್ಥಿತಿ ಹೀಗೆ ಹೀನಾಯವಾಗಿರು ವಾಗ, ಬಂಗಾಳದಿಂದ ಒಬ್ಬ ಸಾಧಕರು ಬೃಂದಾವನಕ್ಕೆ ಬಂದರು. ಅವರೇ ಮಾನ್ಯ ಬ್ರಹ್ಮಚಾರಿ ಹರೇಂದ್ರನಾಥ. ಇವರು ಸ್ವಾಮಿ ವಿವೇಕಾನಂದರ ದೂರದ ಬಂಧು. ಸ್ವಾಮೀಜಿಯವರು ೧೯೦೨ ರಲ್ಲಿ ದೇಹತ್ಯಾಗ ಮಾಡಿದ ಮೇಲೆ, ಅವರ ಆದರ್ಶವಾದ 'ಜೀವರಲ್ಲಿ ದೇವನನ್ನು ಕಾಣು' ಎಂಬ ನುಡಿಯಿಂದ ಹರೇಂದ್ರನಾಥರು ಸ್ಫೂರ್ತಿಗೊಂಡರು. ಬೃಂದಾವನಕ್ಕೆ ಬಂದು ಕಾಲಾಬಾಬುವಿನ ಕುಂಜದಲ್ಲಿ (ಇಲ್ಲಿಯೇ ಶ್ರೀಮಾತೆಯವರು ಒಂದು ವರ್ಷ ತಂಗಿದ್ದರು) ಉಳಿದುಕೊಂಡು ತಮ್ಮ ಅಧ್ಯಾತ್ಮ ಸಾಧನೆಯನ್ನು ಮುಂದುವರೆಸಲು ಇಚ್ಛೆಪಟ್ಟರು. ಸ್ವಾಮಿ ವಿವೇಕಾನಂದರು ಪರಮಾತ್ಮನನ್ನು ಪಡೆಯಲು ಲೋಕದ ಮುಂದೆ ಇಟ್ಟ 'ದರಿದ್ರನಾರಾಯಣ ಸೇವೆ', ಅಂದರೆ ರೋಗಿ ನಾರಾಯಣ, ಹಸಿದ ನಾರಾಯಣ, ಅವಿದ್ಯಾ ನಾರಾಯಣರ ಸೇವೆಗೆ ಬ್ರಹ್ಮಚಾರಿ ಹರೇಂದ್ರನಾಥರ ಹೃದಯ ತುಡಿಯು ತ್ತಿತ್ತು. ೧೯೦೬ರಲ್ಲಿ ಹರೇಂದ್ರನಾಥರು ಬೃಂದಾವನಕ್ಕೆ ಬಂದು ಸಾಧನೆಗೆ ತೊಡಗಿದಾಗ, ಅವರ ಸುತ್ತಮುತ್ತ ರೋಗ ರುಜಿನಗಳು, ರಸ್ತೆಯಲ್ಲಿಯೇ ನರಳುತ್ತಿರುವ ರೋಗಿಗಳು ಇರುವುದನ್ನು ಕಂಡು, ಅವರ ಹೃದಯ ಮಿಡಿಯಿತು. ಈ ನತದೃಷ್ಟರಿಗಾಗಿ ಹರೇಂದ್ರನಾಥರು ಹೋಮಿಯೋಪಥಿ ಔಷಧವನ್ನು ತಮ್ಮ ಜೊತೆಯಲ್ಲಿ ಇಟ್ಟುಕೊಂಡು ರೋಗಿಗಳ ಸೇವೆ ಮಾಡತೊಡಗಿದರು. ಶೀಘ್ರವೇ ಜನ ಅವರನ್ನು 'ಔಷಧಿ ಬಾಬಾಜಿ' ಎಂದು ಕರೆಯಲಾರಂಭಿಸಿದರು. ಹೀಗೆ ಹರೇಂದ್ರ ನಾಥರು ಜನಪ್ರಿಯರಾದರು. ಬೃಂದಾವನದ ಸುತ್ತಮುತ್ತಲ ಜನರು ಅವರ ಬಳಿಗೆ ಔಷಧಿಗಾಗಿ ಬರುತ್ತಿದ್ದರು. ಹೀಗೆ ಬ್ರಹ್ಮಚಾರಿ ಹರೇಂದ್ರನಾಥರು ತಮ್ಮ ಆಧ್ಯಾತ್ಮಿಕ ಸಾಧನೆಯ ಜೊತೆಗೆ ದರಿದ್ರನಾರಾಯಣರ ಸೇವೆಯನ್ನೂ ಅಳವಡಿಸಿ ಕೊಂಡರು.

**ದೈವ ನೀಡಿದ ಸಹಾಯ :** ೧೯೦೭ನೇ ಇಸವಿಯಲ್ಲಿ ಸ್ಥಳೀಯ ಶ್ರೀ ಜ್ಞಾನೇಶ್ವರ ಚಂದ್ರಸೇನ್ ಎಂಬ ದಯಾವಂತ ಬಂಗಾಳಿ ಗೃಹಸ್ಥರು ಹಾಗೂ ಅವರ ಮಗ, ಹರೇಂದ್ರನಾಥರು ಮಾಡುತ್ತಿದ್ದ

ನಿಷ್ಕಾಮ ಸೇವೆಯನ್ನು ನೋಡಿ, ಅವರಿಗೆ ತಮ್ಮ ಕೈಲಾದ ಸಹಾಯವನ್ನು ಮಾಡತೊಡಗಿದರು.

ಕಾಲಾಬಾಬು ಕುಂಜವು ಬಲರಾಮಬೋಸನ ಕುಟುಂಬದವರಿಗೆ ಸೇರಿತ್ತು. ಆ ಕಟ್ಟಡದ ಹೊರ ವಲಯದಲ್ಲಿದ್ದ ಎರಡು ಕೊಠಡಿಗಳನ್ನು ರೋಗಿಗಳ ಸೇವೆಗಾಗಿ, ಬಾಡಿಗೆರಹಿತವಾಗಿ ನೀಡಲು ಆ ಕುಟುಂಬದವರು ಒಪ್ಪಿದರು. ರೋಗಿಗಳ ಸೇವೆಯಲ್ಲಿ ಸಮಮನಸ್ಕರಾದ ಸ್ವಯಂಸೇವಕರು ರೋಗಿಗಳನ್ನು ಚಿಕಿತ್ಸೆಗಾಗಿ ತರುತ್ತಿದ್ದರು. ಒಂದು ಕೊಠಡಿ ಇದಕ್ಕಾಗಿ ಮೀಸಲಾಗಿತ್ತು. ಇನ್ನೊಂದು ಕೊಠಡಿಯಲ್ಲಿ ಔಷಧಿ ವಿತರಣೆಯ ವ್ಯವಸ್ಥೆ ಇತ್ತು. ಹೀಗೆ ಬೃಂದಾವನ ಸೇವಾಶ್ರಮ ಆರಂಭವಾಯಿತು.



೧೯೦೭ರಲ್ಲಿ ಕಲ್ಕತ್ತೆಯ ಜಮೀನುದಾರನೊಬ್ಬನು ಧನ ಸಹಾಯ ಮಾಡಿದನು. ಹರೇಂದ್ರನಾಥ್, ಜ್ಞಾನೇಶ್ವರ ಚಂದ್ರ ಸೇನ್ ಮತ್ತು ಅವರ ಮಗ, ಹಾಗೂ ಇತರರನ್ನು ಒಳಗೊಂಡ ಒಂದು ಕಾರ್ಯಕಾರಿ ಸಮಿತಿ ರಚಿತವಾಯಿತು. ಎಲ್ಲ ಸದಸ್ಯರೂ ರಾಮಕೃಷ್ಣ ಮಿಷನ್ನಿನ ಸೇವಾ ಆದರ್ಶಕ್ಕೆ ಬದ್ಧರಾಗಿದ್ದರು. ಜಮೀನುದಾರನ ಹಣದಿಂದ ಅಲೋಪಥಿ ಔಷಧ ವಿಭಾಗ ತೆರೆದು, ಒಳರೋಗಿಗಳ ಶುಶ್ರೂಷೆಗಾಗಿ ೪ ಹಾಸಿಗೆಗಳನ್ನು ಸಿದ್ಧ ಪಡಿಸಲಾಯಿತು. ಒಂದು ವರ್ಷದಲ್ಲಿ ೨೬ ಒಳರೋಗಿಗಳಿಗೆ, ೨೭೫ ಹೊರರೋಗಿಗಳಿಗೆ ಚಿಕಿತ್ಸೆ ನೀಡಲಾಯಿತು.

**ರಾಮಕೃಷ್ಣ ಮಿಷನ್ನಿಗೆ ಸೇರ್ಪಡೆ :** ಎಷ್ಟೇ ಉತ್ಸಾಹಿತ ಸ್ವಯಂಸೇವಕರಿದ್ದರೂ, ಅವರೆಲ್ಲರ ಪೂರ್ಣ ಸಹಕಾರ ಹಾಗೂ ಬೆಂಬಲವಿದ್ದರೂ, ಅನಿರೀಕ್ಷಿತವಾಗಿ ಅನೇಕ ತೊಂದರೆಗಳು ಬರಲಾರಂಭಿಸಿದವು. ಹರೇಂದ್ರನಾಥರಿಗೆ ಸಣ್ಣದಾಗಿ ಪ್ರಾರಂಭವಾದ ಈ ಸೇವಾಯೋಜನೆಯನ್ನು ಬೃಹತ್ತಾಗಿ ಮಾಡಬೇಕೆಂಬ ಕನಸಿತ್ತು; ಅದನ್ನು ಮಾಡಬಲ್ಲೆನೆಂಬ ದೃಢ ನಂಬಿಕೆಯೂ ಇತ್ತು. ಆದ್ದರಿಂದ ರಾಮಕೃಷ್ಣ ಮಿಷನ್ನಿನ ಆಡಳಿತಕ್ಕೆ ಈ ಸೇವಾಶ್ರಮವನ್ನು ಸೇರ್ಪಡೆ ಮಾಡಿದರೆ ಅನೇಕ ರೀತಿಯ ಪ್ರಯೋಜನಗಳಾಗಬಹುದೆಂದು ಅವರು ಯೋಚಿಸಿದರು. ಇದಕ್ಕಾಗಿ ರಾಮಕೃಷ್ಣ ಮಹಾಸಂಘದ ಆಗಿನ ಅಧ್ಯಕ್ಷರಾಗಿದ್ದ ಪರಮಪೂಜ್ಯ ಸ್ವಾಮಿ ಬ್ರಹ್ಮಾನಂದರಿಗೂ, ಕಾರ್ಯದರ್ಶಿಯಾಗಿದ್ದ ಸ್ವಾಮಿ ಶಾರದಾನಂದರಿಗೂ ಈ ಬಗ್ಗೆ ಮನವಿ ಸಲ್ಲಿಸಿದರು. ರಾಮಕೃಷ್ಣ ಮಿಷನ್ನಿನ ಟ್ರಸ್ಟಿಗಳು ಈ ಸಣ್ಣ ಆಸ್ಪತ್ರೆಯು ಸಲ್ಲಿಸುತ್ತಿರುವ ಸೇವೆಯನ್ನೂ, ಅದಕ್ಕೆ ಮುಂದಿರುವ ಭವ್ಯ ಭವಿಷ್ಯವನ್ನೂ, ಜನಸಾಮಾನ್ಯರಿಗೆ ಇದರಿಂದ ಆಗುವ ಪ್ರಯೋಜನವನ್ನೂ ಅರಿತು ಅನುಮತಿ ನೀಡಿದರು. ೧೯೦೮ರ ಜನವರಿ ೧೨ ರಂದು ರಾಮಕೃಷ್ಣ ಮಿಷನ್ನಿನ ಒಂದು ಶಾಖೆಯಾಗಿ ಬೃಂದಾವನ ಸೇವಾಶ್ರಮ ಸೇರ್ಪಡೆಯಾಯಿತು. ಬಂಗಾಳದ ಹೊರಗೆ ಇದು ಮೂರನೆಯ ಸೇವಾಶ್ರಮವಾಯಿತು.

ರಾಮಕೃಷ್ಣ ಮಿಷನ್ನಿಗೆ ಸೇರ್ಪಡೆಯಾದ ನಂತರ ಆಸ್ಪತ್ರೆಯ ಕಾರ್ಯದಲ್ಲೂ ಬಹಳಷ್ಟು ಅಭಿವೃದ್ಧಿಯಾಯಿತು. ಚಿಕಿತ್ಸೆ ಪಡೆಯುವ ರೋಗಿಗಳ ಸಂಖ್ಯೆಯೂ ಹೆಚ್ಚಾಯಿತು. ಜೊತೆಗೆ ರಾಮಕೃಷ್ಣ ಮಠದಿಂದ ಇದಕ್ಕೆ ನಿಯೋಜಿತರಾದ ಹೊಸ ಸಂನ್ಯಾಸಿ ಸೇವಾಕರ್ತರಿಗೆ ಅಗತ್ಯವಾದ ವಸತಿಯ ಪ್ರಶ್ನೆ ಎದ್ದಿತು. ಇದಲ್ಲದೆ ಆಸ್ಪತ್ರೆಯ ವೆಚ್ಚವೂ ಹೆಚ್ಚಾಯಿತು.

೧೯೦೭-೧೯೧೨ ರವರೆಗೆ ಸೇವಾಶ್ರಮದ ಕಾರ್ಯಚಟುವಟಿಕೆಗಳ ಬಗ್ಗೆ, ಅಭಿವೃದ್ಧಿಯ ಬಗ್ಗೆ ವಿವರ ನೀಡುವ ಒಂದು ಸಣ್ಣ ಪುಸ್ತಕವು ಸೇವಾಶ್ರಮದಲ್ಲಿದೆ. ಅದರಲ್ಲಿ ಸ್ವಾಮಿ ಬ್ರಹ್ಮಾನಂದರು ನೀಡಿದ ಹಿತವಚನಗಳ ಜೊತೆಗೆ, ಸೇವಾಶ್ರಮದ ಬಗ್ಗೆ ಅವರು ಆಡಿರುವ ಪ್ರಶಂಸೆಯ ಮಾತುಗಳೂ ಇವೆ. ಸ್ವಾಮಿ ಬ್ರಹ್ಮಾನಂದರು ಸೇವಾಶ್ರಮದ ಅಧ್ಯಕ್ಷರೆಂದೂ, ಹರೇಂದ್ರನಾಥರು ಗೌರವ ಕಾರ್ಯದರ್ಶಿಗಳೆಂದೂ ಆ ಕಾಲಾವಧಿಯ ವಾರ್ಷಿಕ ವರದಿಗಳಲ್ಲಿ ನಮೂದಿಸಲ್ಪಟ್ಟಿದೆ. ಮುಂದಿನ ವಾರ್ಷಿಕ ವರದಿಗಳಲ್ಲಿ ರಾಮಕೃಷ್ಣ ಮಹಾಸಂಘದ ಆಗಿನ ಅಧ್ಯಕ್ಷರುಗಳಾದ ಸ್ವಾಮಿ ಬ್ರಹ್ಮಾನಂದ, ಸ್ವಾಮಿ ಶಿವಾನಂದ, ಸ್ವಾಮಿ ಅಖಂಡಾನಂದ, ಸ್ವಾಮಿ ವಿಜ್ಞಾನಾನಂದ, ಸ್ವಾಮಿ ಶುದ್ಧಾನಂದ ಮತ್ತು ಸ್ವಾಮಿ ವಿರಜಾನಂದರ ಹೆಸರಿನಲ್ಲಿ ಧನಸಹಾಯಕ್ಕಾಗಿ ಮಾಡಿದ ಮನವಿಗಳಿವೆ.

ಈ ಅವಧಿಯಲ್ಲಿ ಸೇವಾಶ್ರಮದ ಆರ್ಥಿಕ ಸ್ಥಿತಿಯು ಅಷ್ಟೇನೂ ತೃಪ್ತಿಕರವಾಗಿರಲಿಲ್ಲ. ಆದರೆ ರೋಗಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿತ್ತು. ಕಾಲಾಬಾಬು ಕುಂಜದಲ್ಲಿ ಸ್ಥಳದ ಅಭಾವವಿದ್ದುದರಿಂದ, ಅಗತ್ಯವಿರುವ ಎಲ್ಲ ರೋಗಿಗಳನ್ನೂ ಒಳರೋಗಿಗಳನ್ನಾಗಿ ತೆಗೆದುಕೊಳ್ಳಲು ಆಗುತ್ತಿರಲಿಲ್ಲ. ಅಲ್ಲದೇ ಸಿಬ್ಬಂದಿ ವರ್ಗದವರಿಗೆ ವಿಶ್ರಾಂತಿ ತೆಗೆದುಕೊಳ್ಳಲು ಬೇರೆ ಸ್ಥಳ ಇರಲಿಲ್ಲ.

**ಹೊಸ ಜಾಗ ಪಾನಿಘಾಟ್‌ನಲ್ಲಿ ಸೇವಾಶ್ರಮ:** ದಿವ್ಯತ್ರಯರ ಕೃಪೆಯಿಂದಲೂ, ಪ್ರೇರಣೆಯಿಂದಲೂ, ಬ್ರಹ್ಮಚಾರಿ ಹರೇಂದ್ರನಾಥರು ಬೃಂದಾವನಕ್ಕೆ ಆಗಮಿಸಿದ್ದು ಹಾಗೂ ಸೇವಾಶ್ರಮವು ಜನ್ಮತಾಳಿದ್ದು ಸರಿಯಷ್ಟೇ. ಅದೇ ಕೃಪಾಪ್ರವಾಹವೇ ಸೇವಾಶ್ರಮವು ಹೊಸಜಾಗಕ್ಕೆ ಸ್ಥಳಾಂತರಗೊಳ್ಳಲು ಕಾರಣವಾಯಿತು. ಸೇವಾಶ್ರಮದ ಶ್ರದ್ಧಾಪೂರ್ವಕ ಸೇವೆಯು ಕೆಲವು ಧನಿಕರನ್ನು ಆಕರ್ಷಿಸಿ ಅವರ ನೆರವಿನಿಂದ ಮತ್ತು ಸ್ವಾಮಿ ಬ್ರಹ್ಮಾನಂದರ ಮಾರ್ಗದರ್ಶನದಿಂದ ಸೇವಾಶ್ರಮವು ಯಮುನಾ ನದಿ ತೀರದಲ್ಲಿ, ಪಾನಿಘಾಟ್‌ನ ಹತ್ತಿರ ೮.೩೨ ಎಕರೆ ಜಾಗವನ್ನು ೨೨. ೮. ೧೯೧೫ರಂದು ಖರೀದಿಸಿತು. ಪುರುಷರಿಗೆ ಮತ್ತು

ಮಹಿಳೆಯರಿಗೆ ಎರಡೆರಡು ಪ್ರತ್ಯೇಕ ವಾರ್ಡ್‌ಗಳನ್ನು ಹುಲ್ಲು ಛಾವಣಿ ಹೊಂದಿಸಿ ನಿರ್ಮಿಸಲಾಯಿತು. ಆದರೆ ಸೇವಾಶ್ರಮದ ಸಿಬ್ಬಂದಿಗೆ ಯಾವ ವಸತಿ ಸೌಕರ್ಯವೂ ಇರಲಿಲ್ಲ. ಅವರೆಲ್ಲರೂ ಒಂದು ಸಣ್ಣ ಗುಡಿಸಿಲಿನಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಆರ್ಥಿಕ ಮುಗ್ಗಟ್ಟೇ ಇದಕ್ಕೆ ಮುಖ್ಯ ಕಾರಣವಾಗಿತ್ತು.

ಅವಿಶ್ರಾಂತ ದುಡಿಮೆಯಿಂದಾಗಿ (೧೯೦೩-೧೯೨೦ ರವರೆಗೆ), ಬ್ರಹ್ಮಚಾರಿ ಹರೇಂದ್ರನಾಥ ಮಹಾರಾಜರ ಆರೋಗ್ಯ ಹದಗೆಟ್ಟಿತು. ಅವರು ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತರಾಗಿ, ೧೯೨೪ರಲ್ಲಿ ಇಹಲೋಕವನ್ನು ತ್ಯಜಿಸಿದರು.

ಅವರ ಸ್ಥಾನವನ್ನು ತುಂಬಿದವರು ಸ್ವಾಮಿ ವೇದಾನಂದರು. ಸೇವಾಶ್ರಮವು ಅವರ ನೇತೃತ್ವದಲ್ಲಿ ಬಹಳಷ್ಟು ಅಭಿವೃದ್ಧಿ ಹೊಂದಿತು. 'ಸಂಚಾರಿ ಚಿಕಿತ್ಸಾ ಘಟಕ' ಆರಂಭವಾಯಿತು. ಮನೆಮನೆಗೆ ಹೋಗಿ ಚಿಕಿತ್ಸೆ ಒದಗಿಸುವ ಕಾರ್ಯ ಏರ್ಪಾಡಾಯಿತು. ಆದರೆ ಆರ್ಥಿಕ ಸ್ಥಿತಿಯಲ್ಲಿ ಏನೂ ಸುಧಾರಣೆ ಕಂಡುಬರಲಿಲ್ಲ. ಸೇವಾಶ್ರಮದ ಉಳಿವಿಗೆ ಸಂನ್ಯಾಸಿಗಳ, ಬ್ರಹ್ಮ ಚಾರಿಗಳ ನಿರಂತರ, ನಿಷ್ಕಾಮಸೇವೆಯೇ ಅತ್ಯಮೂಲ್ಯ ಕೊಡುಗೆಯಾಗಿತ್ತು. ಆ ನಿಸ್ವಾರ್ಥ ದುಡಿಮೆಯೇ ಈಗ ಸೇವಾ ಶ್ರಮ ಕಂಡಿರುವ ಅಭಿವೃದ್ಧಿಗೆ ಕಾರಣ. ಕ್ರಮೇಣ ಆಶ್ರಮದ ಚಟುವಟಿಕೆಗಳು ಹೆಚ್ಚಾಗುತ್ತಾ ಬಂದವು. ೧೯೨೪ರಲ್ಲಿ ವೇದಾ ನಂದಜಿಯವರ ಆರೋಗ್ಯ ತೀವ್ರ ಹದಗೆಟ್ಟು ಆ ವರ್ಷವೇ ಅವರು ದೈವಾಧೀನರಾದರು. ಆ ವರ್ಷದ ಇನ್ನೊಂದು ದುರಂತವೆಂದರೆ ಯಮುನಾ ನದಿಯಲ್ಲಿ ಪ್ರಚಂಡ ಪ್ರವಾಹವು ಬಂದು ಸೇವಾಶ್ರಮದ ಸಲಕರಣೆಗಳನ್ನೂ ಕಟ್ಟಡಗಳನ್ನೂ ಕೊಚ್ಚಿಹಾಕಿದ್ದು.

೧೯೨೫ ರಲ್ಲಿ ಸ್ವಾಮಿ ಭುವನೇಶ್ವರಾನಂದಜಿಯವರು ಸೇವಾಶ್ರಮದ ಕಾರ್ಯದರ್ಶಿಗಳಾದರು. ಯಾತ್ರಿಕರ ಸಂಖ್ಯೆ ಹಬ್ಬಹರಿದಿನಗಳಲ್ಲಿ ಹೆಚ್ಚಾದಂತೆ, ಸಾಂಕ್ರಾಮಿಕ ರೋಗಗಳೂ ಹೆಚ್ಚುತ್ತಿದ್ದವು. ಸಾಂಕ್ರಾಮಿಕ ರೋಗಗಳಿಗೆ ಪ್ರತ್ಯೇಕ ವಾರ್ಡ್ ಇರಬೇಕೆಂದು ನಿರ್ಧಾರವಾದರೂ, ಅದನ್ನು ನಿರ್ಮಿಸಲು ಆರ್ಥಿಕ ಪರಿಸ್ಥಿತಿ ಅಡ್ಡ ಬಂದಿತು. ಸರ್ಕಾರದ ನೆರವೂ ಅತ್ಯಲ್ಪವಾಗಿತ್ತು. ಹೀಗಾಗಿ ಆ ನಿರ್ಧಾರ ನೆನೆಗುದಿಗೆ ಬಿತ್ತು. ೧೯೨೬ರಲ್ಲಿ ಸ್ವಾಮಿ ಗಿರಿಜಾನಂದರು ಕಾರ್ಯದರ್ಶಿಗಳಾದರು. ೧೯೨೮ರಲ್ಲಿ ಸಾಂಕ್ರಾಮಿಕ ರೋಗಿಗಳಿಗೆ ವಿಶೇಷ ವಾರ್ಡ್ ನಿರ್ಮಿಸಲಾಯಿತು. ೧೯೨೯ರಲ್ಲಿ ಕ್ಷಯರೋಗಿಗಳಾಗಿ ಪ್ರತ್ಯೇಕ ವಾರ್ಡ್ ನಿರ್ಮಿಸಲಾಯಿತು. ಮಹಾತ್ಮ ಗಾಂಧಿಯವರು ಅದನ್ನು ಉದ್ಘಾಟಿಸಿದರು. ಅವರು ಗಣ್ಯ ವ್ಯಕ್ತಿಗಳ ಭೇಟಿಯ ಪುಸ್ತಕದಲ್ಲಿ "I have seen this institution before and I want its success" (ನಾನು ಹಿಂದೆ ಈ ಸಂಸ್ಥೆಗೆ ಬಂದಿದ್ದೆ. ನಾನು ಅದರ ಶ್ರೇಯೋಭಿವೃದ್ಧಿಯನ್ನು ಬಯಸುತ್ತೇನೆ) ಎಂದು ಬರೆದಿದ್ದಾರೆ. ಅವರು ಭೇಟಿ ನೀಡಿದ ತಾರೀಖು ೮-೧೨-೧೯೨೯. ಸ್ವಾಮಿ ಗಿರಿಜಾನಂದರು ನಿವೃತ್ತಿಯಾದ ಮೇಲೆ ೧೯೨೯ರಲ್ಲಿ ಸ್ವಾಮಿ ಸಹಜಾನಂದರು ಕಾರ್ಯದರ್ಶಿಗಳಾದರು. ೧೯೩೧ರಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ವಾರ್ಡ್ ನಿರ್ಮಿಸಲಾಯಿತು. ೧೯೦೮ರಲ್ಲಿ ರಾಮಕೃಷ್ಣ ಮಿಷನ್ ಸೇವಾಶ್ರಮವನ್ನು ತನ್ನ ಕೈಗೆ ತೆಗೆದುಕೊಂಡಾಗ, ಶ್ರೀರಾಮಕೃಷ್ಣರಿಗಾಗಿ ಒಂದು ಸಣ್ಣ ಗುಡಿಯನ್ನು ಕಟ್ಟಲಾಯಿತು. ಇದೇ ರಾಮಕೃಷ್ಣರ ಬೃಹತ್ ಮಂದಿರಕ್ಕೆ ಬೀಜಪ್ರಾಯವಾಯಿತು. ಈ ಸಣ್ಣ ಮಂದಿರವು ಯಮುನಾತೀರದಲ್ಲಿ ಇನ್ನೂ ಇದೆ.

ನೂರಾರು ಗ್ರಾಮಸ್ಥರು ಹೊರರೋಗಿಗಳಾಗಿ ಚಿಕಿತ್ಸೆಗಾಗಿ ದೂರದೂರದಿಂದ ಬರುತ್ತಿದ್ದರು. ಸದ್ಯ ಲಭ್ಯವಿದ್ದ ಜಾಗ ಸಾಲುತ್ತಿರಲಿಲ್ಲ. ಹೀಗಾಗಿ ಉಚಿತ ಔಷಧಾಲಯವನ್ನು ೧೯೪೩ರಲ್ಲಿ ವಿಶಾಲವಾದ ಕಟ್ಟಡಕ್ಕೆ ವರ್ಗಾಯಿಸಲಾಯಿತು.

ನೇತಾಜಿ ಸುಭಾಷ್‌ಚಂದ್ರ ಬೋಸರು ೪-೩-೧೯೪೦ರಂದು ಸೇವಾಶ್ರಮಕ್ಕೆ ಭೇಟಿಯಿತ್ತರು. ಅವರು ಗಣ್ಯರ ಭೇಟಿ ಪುಸ್ತಕದಲ್ಲಿ ಬರೆದಿರುವ ಸಾಲುಗಳು ಚಿರಸ್ಮರಣೀಯವಾಗಿವೆ.

ಸ್ವಾಮಿ ಸಹಜಾನಂದರು ದೇಹ ಬಿಟ್ಟ ಮೇಲೆ ಸ್ವಾಮಿ ಸ್ವಯಂಪ್ರಭಾನಂದರು ಕಾರ್ಯದರ್ಶಿಗಳಾದರು. ಇವರ ಕಾಲದಲ್ಲಿ ೧೯೪೩ರಲ್ಲಿ ಇಬ್ಬರು ಶ್ರೀಮಂತ ದಾನಿಗಳ ನೆರವಿನಿಂದ, ನೇತ್ರ ಚಿಕಿತ್ಸಾ ಘಟಕವನ್ನು ತೆರೆಯಲಾಯಿತು.

ಸ್ವಾಮಿ ಹಿರಣ್ಮಯಾನಂದರು ೧೯೪೬ರಲ್ಲಿ ಕಾರ್ಯದರ್ಶಿಗಳಾಗಿ ಅಧಿಕಾರ ವಹಿಸಿಕೊಂಡರು. ಚಿಂತನಾಶೀಲರಾದ ಇವರು ಹೊಸ ಹೊಸ ಯೋಜನೆಗಳನ್ನು ರೂಪಿಸಿದರು. ೧೯೪೭ರಲ್ಲಿ ವೈಜ್ಞಾನಿಕ ಪರೀಕ್ಷಾ ಕೇಂದ್ರ (ಕ್ಲಿನಿಕಲ್ ಲ್ಯಾಬೊರೇಟರಿ) ಅಸ್ತಿತ್ವಕ್ಕೆ ಬಂದಿತು. ಪದೇ ಪದೇ ಬರುವ ಪ್ರವಾಹಭೀತಿಯಿಂದ ತಪ್ಪಿಸಿಕೊಳ್ಳಲು ಎತ್ತರ ಪ್ರದೇಶಕ್ಕೆ ಸೇವಾಶ್ರಮವನ್ನು ವರ್ಗಾಯಿಸಲು ನಿರ್ಧಾರ ತೆಗೆದುಕೊಳ್ಳಲಾಯಿತು. ೧೯೪೮ರಲ್ಲಿ ಸ್ವಾಮಿ ಹಿರಣ್ಮಯಾನಂದರ ಜಾಗಕ್ಕೆ ಸ್ವಾಮಿ ಪ್ರಜ್ಞಾನಂದರು ಬಂದರು. ಇವರು ಶಾರದಾ ಮಾತೆಯವರ ಶಿಷ್ಯರು. ಹರಿದ್ವಾರದ ಸೇವಾಶ್ರಮದಲ್ಲಿ ಸೇವೆ ಸಲ್ಲಿಸಿದ್ದರು. ಈ ಸಮಯದಲ್ಲಿಯೇ ಹೊಸಜಾಗಕ್ಕೆ ಹುಡುಕಾಟ ಆರಂಭವಾಗಿತ್ತು. ಮಥುರಾ ಬೃಂದಾವನ ರಸ್ತೆಯಲ್ಲಿ ಸೂಕ್ತ ಸ್ಥಳ ದೊರಕಿತು. ಇದು ಎಲ್ಲ ರೀತಿಯಲ್ಲಿಯೂ ಅನುಕೂಲವಾಗಿತ್ತು. ಉತ್ತರಪ್ರದೇಶದ ಸರ್ಕಾರದ ಸಹಾಯಕ್ಕಾಗಿ ವಿನಂತಿಸಲಾಯಿತು. ಸ್ವಾಮಿ ಪ್ರಜ್ಞಾನಂದರ ಶ್ರದ್ಧಾಪೂರಿತ ಪ್ರಯತ್ನವು ದಿವ್ಯತ್ರಯರ ಕೃಪೆಯಿಂದ ಫಲ ನೀಡಿತು. ೧೯೫೧ರಿಂದ ಉತ್ತರಪ್ರದೇಶ ಸರ್ಕಾರವು ದೀರ್ಘಕಾಲದ ಗುತ್ತಿಗೆಯ ಆಧಾರದ ಮೇಲೆ ೨೨.೭೬ ಎಕರೆ ಭೂಮಿಯನ್ನು ನೀಡಿತು. ಈ ಭೂಮಿಯಲ್ಲಿ ಅತ್ಯಾಧುನಿಕ ಸುಸಜ್ಜಿತ ಆಸ್ಪತ್ರೆಯನ್ನು ನಿರ್ಮಿಸಲು ಯೋಜನೆ ರೂಪುಗೊಂಡಿತ್ತಾದರೂ, ಇದು ಕಾರ್ಯಗತವಾಗಲು ಒಂದು ದಶಕವೇ ಬೇಕಾಯಿತು. ಇದಕ್ಕೆ ಮುಖ್ಯವಾಗಿ ಹಣಕಾಸಿನ ಅಡಚಣೆಯೇ ಕಾರಣವಾಗಿತ್ತು.

೧೯೫೦ರಲ್ಲಿ ಬೃಂದಾವನದಲ್ಲಿ ಮೇಳ ನಡೆಯಿತು. ಸೇವಾಶ್ರಮವು ಯಮುನಾನದಿ ತೀರದಲ್ಲಿ ಶಿಬಿರಗಳಿಗೆ ಅನೇಕ ಹಾಸಿಗೆಗಳನ್ನು ಒದಗಿಸಿದುದಲ್ಲದೇ, ಅನಾರೋಗ್ಯ ಪೀಡಿತ ಯಾತ್ರಿಕರಿಗೆ ಸಾಧಾರಣ ಚಿಕಿತ್ಸೆ ಒದಗಿಸಿತು. ೧೯೫೧ರಲ್ಲಿ ಕಣ್ಣು ಚಿಕಿತ್ಸಾ ವಿಭಾಗವನ್ನು ವಿಸ್ತರಿಸಲಾಯಿತು. ಹೊಸ ಚಿಕಿತ್ಸೆಗಳಾದ

ಕಣ್ಣು ಗುಡ್ಡೆಯ ಪಾರದರ್ಶಕ ಭಾಗ ಬದಲಾವಣೆ ಮತ್ತು ಪ್ಲಾಸ್ಟಿಕ್ ಲೆನ್ಸ್‌ನ ಅಳವಡಿಕೆಗಳನ್ನು ಯಶಸ್ವಿಯಾಗಿ ಸೇರಿಸಲಾಯಿತು. ಉತ್ತರಪ್ರದೇಶದ ದೂರದ ಊರುಗಳಿಂದ ಜನರು ಚಿಕಿತ್ಸೆಗಾಗಿ ಬರಲಾರಂಭಿಸಿದರು. ಈ ಹೆಚ್ಚಿನ ಹೊಣೆಯನ್ನು, ಶ್ರೀರಾಮಕೃಷ್ಣರ ಬೋಧನೆಯಾದ 'ಶಿವಜ್ಞಾನೇ ಜೀವಸೇವಾ' – ಈ ಸಂದೇಶದಿಂದ ಸ್ಫೂರ್ತಿ ಪಡೆದ ರಾಮಕೃಷ್ಣರ ಸಂಘದ ಸಂನ್ಯಾಸಿಗಳು, ಬ್ರಹ್ಮಚಾರಿಗಳು ಯಶಸ್ವಿಯಾಗಿ ನಿರ್ವಹಿಸಿದರು. ೧೯೫೪ರಲ್ಲಿ ದಂತ ಚಿಕಿತ್ಸಾ ವಿಭಾಗವನ್ನು ತೆರೆಯಲಾಯಿತು. ಈ ಎಲ್ಲಾ ಕಾರಣಗಳಿಂದ ಕೂಡ, ಹೊಸ ಆಸ್ಪತ್ರೆಯ ನಿರ್ಮಾಣ ಬಹಳ ತಡವಾಯಿತು.

**ಸೇವಾಶ್ರಮದ ಈಗಿನ ಸ್ಥಳವಾದ ಸ್ವಾಮಿ ವಿವೇಕಾನಂದ ರಸ್ತೆ, ಬೃಂದಾವನಕ್ಕೆ ಸ್ಥಳಾಂತರ:** ೧೯೫೪ರಲ್ಲಿ ಕಾರ್ಯದರ್ಶಿಗಳಾಗಿ ಅಧಿಕಾರ ವಹಿಸಿಕೊಂಡ ಸ್ವಾಮಿ ಕೃಪಾನಂದರ ಪರಿಶ್ರಮ ಫಲ ನೀಡಿತು. ಅವರ ನೆರವಿಗೆ ಅನೇಕ ಸ್ವಾಮಿಗಳ ತಂಡವೇ ಬೃಂದಾವನಕ್ಕೆ ಬಂದಿಳಿಯಿತು. ಎಲ್ಲರ ಸಹಕಾರ, ಅವಿರತ ಶ್ರಮ, ಶ್ರದ್ಧೆಗಳಿಂದ ಸೇವಾಶ್ರಮ ಅದ್ಭುತ ಪ್ರಗತಿ ಸಾಧಿಸಿತು. ಹೊಸಜಾಗದಲ್ಲಿ ಆಸ್ಪತ್ರೆಯ ನಿರ್ಮಾಣಕ್ಕೆ ಹಣದ ಅಡಚಣೆಯಿದ್ದುದು ಸರಿಯಷ್ಟೇ. ಆದರೆ ದಿವ್ಯತ್ರಯರ ಕೃಪೆಯಿಂದ ಹಂತಹಂತವಾಗಿ ಆರ್ಥಿಕ ಸಹಾಯ ದೊರೆತು ಆಸ್ಪತ್ರೆಯ ನಿರ್ಮಾಣವಾಯಿತು. ಉತ್ತರ ಪ್ರದೇಶದ ಅಂದಿನ ರಾಜ್ಯಪಾಲರಾಗಿದ್ದ ಶ್ರೀ ವಿ. ವಿ. ಗಿರಿಯವರು ೧೯೫೭ರಲ್ಲಿ ಇದರ ಶಂಕುಸ್ಥಾಪನೆ ನೆರವೇರಿಸಿದರು. ೧೦೦ ಹಾಸಿಗೆಗಳುಳ್ಳ ಆಸ್ಪತ್ರೆಯ ನಿರ್ಮಾಣ ೧೯೬೨ರಲ್ಲಿ ಪೂರ್ಣವಾಯಿತು. ೨೬-೨-೧೯೬೨ ರಂದು ಹೊರರೋಗಿಗಳ ಮತ್ತು ಒಳರೋಗಿಗಳ ವಿಭಾಗ ಆರಂಭಗೊಂಡಿತು. ಗೋಶಾಲೆಯು ಸ್ವಾಮಿ ಶಾರದೇಶಾನಂದರಿಂದ ಉದ್ಘಾಟಿಸಲ್ಪಟ್ಟಿತು. ಪ್ರಧಾನ ಮಂತ್ರಿಗಳಾಗಿದ್ದ ಪಂಡಿತ್ ಜವಹರ್‌ಲಾಲ್ ನೆಹರೂ ೮-೧೨-೧೯೬೩ ರಂದು ವಿಧ್ಯುಕ್ತವಾಗಿ ನವೀನ ಆಸ್ಪತ್ರೆಯನ್ನು ಲೋಕಾರ್ಪಣೆ ಮಾಡಿದರು. ಕಾಲಕಳೆದಂತೆ ಹೊಸ ಕಟ್ಟಡಗಳು, ಹೊಸ ವಿಭಾಗಗಳು ಆಸ್ಪತ್ರೆಗೆ ಸೇರ್ಪಡೆಯಾಗುತ್ತಲೇ ಇವೆ.

ಹೊಸ ಕ್ಯಾನ್ಸರ್ ವಾರ್ಡ್ ಅನ್ನು ಕಟ್ಟಲಾಯಿತು. ೨೧ ವರ್ಷಗಳ ಕಾಲ ಸೇವಾಶ್ರಮವನ್ನು ಮುನ್ನಡೆಸಿದ ಸ್ವಾಮಿ ಕೃಪಾನಂದರು ೧೩-೧೨-೧೯೬೯ರಂದು ದೇಹತ್ಯಾಗ ಮಾಡಿದರು. ನಂತರ ಸ್ವಾಮಿ ಭಕ್ತಾನಂದರು ೧೯೭೦ರಿಂದ ೧೯೭೨ರವರೆಗೆ ಕಾರ್ಯದರ್ಶಿಗಳಾಗಿದ್ದರು. ನಂತರ ಸ್ವಾಮಿ ತ್ರಿವಿಕ್ರಮಾನಂದರು ೧೯೭೨ರಲ್ಲಿ ಕಾರ್ಯದರ್ಶಿಗಳಾಗಿ ಅಧಿಕಾರ ವಹಿಸಿಕೊಂಡರು. ಅವರು ಸುಮಾರು ೨೮ ವರ್ಷಗಳ ಕಾಲ ಸೇವಾಶ್ರಮದ ನೇತಾರರಾಗಿ ಅನನ್ಯವಾದ ಪ್ರಗತಿ ಸಾಧಿಸಿ, ೨೦೦೦ನೇ ಇಸವಿಯಲ್ಲಿ ನಿವೃತ್ತಿ ಪಡೆದುಕೊಂಡರು. ಅವರ ಕಾಲದಲ್ಲಿ ಪ್ರಸಿದ್ಧ ವೈದ್ಯರು ಸೇವಾಶ್ರಮವನ್ನು ಸೇರಿದರು. ವೈದ್ಯರಿಗಾಗಿ, ನರ್ಸ್‌ಗಳಿಗಾಗಿ, ಸಿಬ್ಬಂದಿಗಳಿಗಾಗಿ ವಸತಿಗಳನ್ನು ನಿರ್ಮಿಸಲಾಯಿತು. ನರ್ಸಿಂಗ್ ಸ್ಕೂಲ್, ಹೆರಿಗೆಯ ವಿಭಾಗ, ಕಿವಿ ಮೂಗು ವಿಭಾಗ – ಇವೆಲ್ಲವೂ ಆರಂಭವಾಯಿತು. ನಂತರ ಬಂದ ಸ್ವಾಮಿ ಪ್ರಕಾಶಾನಂದರು ಆಯುರ್ವೇದ ಚಿಕಿತ್ಸೆ ಘಟಕವನ್ನು ಆರಂಭಿಸಿದರು. ಆಯುರ್ವೇದ ಮೂಲಿಕೆಗಳಿಗಾಗಿ ಪಾನಿಘಾಟ್‌ನಲ್ಲಿ ೫-೬ ಎಕರೆಗಳಲ್ಲಿ ಸಸ್ಯತೋಟವನ್ನು ನಿರ್ಮಿಸಿದರು. ಬಟ್ಟೆಗಳನ್ನು ಶುಚಿಗೊಳಿಸಲು ಸ್ವಯಂಚಾಲಿತ ಯಂತ್ರಗಳನ್ನು ಖರೀದಿಸಲಾಯಿತು. ರೋಗಿಗಳಿಗೆ ಹಾಲನ್ನು ನೀಡಲು ಮೊದಲು ಇದ್ದ ಗೋಶಾಲೆಯನ್ನು ಮತ್ತಷ್ಟು ನವೀಕರಿಸಲಾಯಿತು. ಸೇವಾಶ್ರಮ ಆಸ್ಪತ್ರೆಯ ಹಾಸಿಗೆಗಳ ಸೌಲಭ್ಯದ ವಿವರ ಹೀಗಿದೆ :

**ಸಾಮಾನ್ಯ ವಾರ್ಡ್ ೧೩೯:** ಪುರುಷರು–೪೬, ಮಹಿಳೆಯರು–೩೮, ಮಕ್ಕಳು–೧೮, ಮೆಟರ್ನಿಟಿ–೨೩, ಕಣ್ಣು–೧೩, ತುರ್ತುಚಿಕಿತ್ಸೆ–೧ :

**ಖಾಸಗಿ ವಾರ್ಡ್–೨೧, ಐಸಿಯು– ೫: ಒಟ್ಟು = ೧೬೫**

ಸೇವಾಶ್ರಮವನ್ನು ಬರಿಗೈಯಿಂದ ಆರಂಭ ಮಾಡಿ ಹಿಮಾಲಯದಷ್ಟು ಬೆಳೆಸಿರುವ, ಅದಕ್ಕೆ ಕಾರಣರಾದ ಮಹನೀಯರೆಲ್ಲರೂ ಸ್ತುತ್ಯರು.

**ಪಲ್ಲಿ ಮಂಗಲ್‌ಸೇವಾ (ಗ್ರಾಮಾಭಿವೃದ್ಧಿ ಯೋಜನೆ):** ೧೯೮೨ರಲ್ಲಿ ಉತ್ತರ ಪ್ರದೇಶದ ಸರ್ಕಾರದ ಅನುದಾನದಿಂದ, ಈ ಮೊದಲೇ ಇದ್ದ Mobile ಚಿಕಿತ್ಸಾ ಘಟಕವನ್ನು ನವೀಕರಿಸಲಾಯಿತು. ಆಧುನಿಕ ಯಂತ್ರಗಳನ್ನು ಅಳವಡಿಸಿ ರೋಗ ಪತ್ತೆ ಹಚ್ಚುವ ಕಾರ್ಯ ಆರಂಭವಾಯಿತು. ಈ ವಾಹನದ ಜೊತೆ ಡಾಕ್ಟರುಗಳು, ಸರ್ಜನ್‌ಗಳು, ನರ್ಸ್‌ಗಳು, ಕಣ್ಣಿನ, ಹಲ್ಲಿನ ಡಾಕ್ಟರ್‌ಗಳು ಹೋಗಿ ಗ್ರಾಮೀಣ ಜನರಿಗೆ ಉಚಿತ ಸೇವೆ ಸಲ್ಲಿಸುತ್ತಿದ್ದಾರೆ. ರೋಗಿ ಗಂಭೀರ ಸ್ಥಿತಿಯಲ್ಲಿದ್ದರೆ ಬೃಂದಾವನದ ಸೇವಾಶ್ರಮಕ್ಕೆ ಕಳುಹಿಸಲಾಗುತ್ತದೆ; ಕಾಲಕಾಲಕ್ಕೆ ಶಿಬಿರಗಳು ಏರ್ಪಾಡಾಗುತ್ತವೆ. ಆರೋಗ್ಯದ ಬಗ್ಗೆ ಮಾಹಿತಿ ನೀಡುವುದಲ್ಲದೇ, ಅನಕ್ಷರಸ್ಥರಿಗೆ ಅಕ್ಷರಜ್ಞಾನವನ್ನೂ ನೀಡಲಾಗುತ್ತದೆ. ಟೈಲರಿಂಗ್, ಎಂಬ್ರಾಯಿಡರಿ ತರಬೇತಿ ಕೂಡ ನೀಡಲಾಗುತ್ತದೆ. ಮುಖ್ಯವಾಗಿ ಆರ್ಥಿಕ ಸ್ವಾವಲಂಬನೆಗೆ ಇಲ್ಲಿ ಪ್ರಾಮುಖ್ಯತೆ ನೀಡಲಾಗುತ್ತಿದೆ.

**ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಂದಿರ:** ೧೯೦೮ರಲ್ಲಿ ರಾಮಕೃಷ್ಣ ಮಿಷನ್ನಿನ ಶಾಖೆಯಾಗಿ ಬೃಂದಾವನ ಸೇವಾಶ್ರಮ ಸೇರ್ಪಡೆಯಾಯಿತು. ೧೯೬೫ರಲ್ಲಿ ರಾಮಕೃಷ್ಣ ಮಠದ ಶಾಖೆಯೊಂದು ಬೃಂದಾವನದಲ್ಲಿ ಆರಂಭವಾಯಿತು. ಅನೇಕ ಹಿರಿಯ ಸಾಧುಗಳು ಕಾಲಕಾಲಕ್ಕೆ ಇಲ್ಲಿಗೆ ಬಂದು ಮಾರ್ಗದರ್ಶನ ಮಾಡುತ್ತಿದ್ದಾರೆ. ೧೯೭೩ರಲ್ಲಿ ರಾಮಕೃಷ್ಣರಿಗಾಗಿ ಅರ್ಪಿತವಾದ ಹೊಸ ಮಂದಿರವನ್ನು ಲೋಕಾರ್ಪಣೆ ಮಾಡಲಾಯಿತು. ೧೯೭೧ರಲ್ಲಿ ಶ್ರೀಮತಿ ಎಂ. ಎಸ್. ಸುಬ್ಬಲಕ್ಷ್ಮಿಯವರು ಮುಂಬೈನಲ್ಲಿ ಭಜನೆ ಕಾರ್ಯಕ್ರಮ ನಡೆಸಿ, ಬಂದ ೨,೪೦,೦೦೦/– ರೂಪಾಯಿಗಳನ್ನು ದೇಣಿಗೆಯಾಗಿ ಈ ಮಂದಿರದ ನಿರ್ಮಾಣಕ್ಕೆ ನೀಡಿದರು. ಇತರ ಎಲ್ಲಾ ರಾಮಕೃಷ್ಣ ಮಠಗಳಂತೆ ಇಲ್ಲಿಯೂ ದೈನಂದಿನ ಪೂಜೆ, ಆರತಿ, ದಿವ್ಯತ್ರಯರ ಜಯಂತಿ, ಶಿವರಾತ್ರಿ, ಕಾಳಿಪೂಜೆ, ದುರ್ಗಾ ಪೂಜೆಗಳು, ಶ್ರೀಕೃಷ್ಣಜನ್ಮಾಷ್ಟಮಿ ಉತ್ಸವ ನಡೆಯುತ್ತಿವೆ.

ಹಿನ್ನುಡಿ: ಕಳೆದ ೧೦೬ ವರ್ಷಗಳಲ್ಲಿ ಸೇವಾಶ್ರಮವು ಅನೇಕ ಕಷ್ಟಗಳನ್ನು, ಆತಂಕಗಳನ್ನು ಎದುರಿಸಬೇಕಾಯಿತು. ಬ್ರಹ್ಮಚಾರಿ ಹರೇಂದ್ರನಾಥರಿಂದ ಹಿಡಿದು ಇದುವರೆಗೆ ಸೇವೆ ಸಲ್ಲಿಸಿದ ಎಲ್ಲ ಸಾಧುಗಳು, ಸಂತರು, ಬ್ರಹ್ಮಚಾರಿಗಳು ಅಭಿನಂದನೆಗೆ ಅರ್ಹರು. ಇವರೆಲ್ಲರ ತ್ಯಾಗ, ಸೇವೆ, ಶ್ರದ್ಧೆಗಳೇ ಸೇವಾಶ್ರಮದ ಅಭೂತಪೂರ್ವ ಬೆಳವಣಿಗೆಗೆ ಕಾರಣವಾಗಿದೆ.



ಬೃಂದಾವನವು ಶ್ರೀಕೃಷ್ಣ ರಾಧೆಯರ ಲೀಲಾ ಸ್ಥಳ. ಅಗೋಚರವಾಗಿ ಕೃಷ್ಣಲೀಲೆಯು ಇನ್ನೂ ನಡೆಯುತ್ತಿದೆಯೆಂದು ಭಕ್ತಾದಿಗಳ ನಂಬಿಕೆ. ಶ್ರೀಚೈತನ್ಯ ಪ್ರಭುವಿನ ಭೇಟಿ (೧೫೧೪), ಶ್ರೀರಾಮಕೃಷ್ಣರ ಬೃಂದಾವನ ದರ್ಶನ (೧೮೬೮), ಶಾರದಾದೇವಿಯವರ ಕ್ಷೇತ್ರವಾಸ (೧೮೮೬-೮೭ ಮತ್ತು ೧೮೯೪-೯೫) ಸ್ವಾಮೀಜಿಯವರ ಐತಿಹಾಸಿಕ ಭೇಟಿ (೧೮೮೮) ಮತ್ತು ಶ್ರೀರಾಮಕೃಷ್ಣರ ಉಳಿದ ಶಿಷ್ಯರು ವಿವಿಧ ಕಾಲಗಳಲ್ಲಿ ಕ್ಷೇತ್ರ ಸಂದರ್ಶನ ಮಾಡಿದ್ದು - ಇವೆಲ್ಲದರಿಂದ ಈ ವ್ರಜಭೂಮಿಯು ಮತ್ತಷ್ಟು ಪುನೀತವಾಗಿದೆ. ಇವರೆಲ್ಲರ ಸದಾಶಯಗಳೇ ಸೇವಾಶ್ರಮದ ಅದ್ಭುತ ಪ್ರಗತಿಗೆ ಕಾರಣವಾಗಿದೆ. ಸ್ವಾಮಿ ವಿವೇಕಾನಂದರ 'ದರಿದ್ರ ದೇವೋ ಭವ' ಸೇವಾಧರ್ಮವು ಇಲ್ಲಿ ಕಾರ್ಯಗತಗೊಳ್ಳುತ್ತಿದೆ.

ಪ್ರತಿ ತಿಂಗಳೂ ಸುಮಾರು ೧,೦೦೦ ಮಂದಿ ಬಡ ಮತ್ತು ವೃದ್ಧ ವಿಧವೆಯರಿಗೆ ಅಕ್ಕಿ, ಗೋಧಿಹಿಟ್ಟು, ಬೇಳೆ ಸಕ್ಕರೆ ಮೊದಲಾದ ಆಹಾರಧಾನ್ಯಗಳನ್ನು ವಿತರಿಸುತ್ತಿರುವುದು ದಿವ್ಯತ್ರಯರ ಕೃಪೆಯೇ ಸರಿ. ಆಗಾಗ್ಗೆ ಪಾತ್ರೆ, ಪಡಗ, ಬಟ್ಟೆಗಳು, ಶಾಲುಗಳು ಮುಂತಾದವನ್ನು ಕೂಡ ಸೇವಾಶ್ರಮದಲ್ಲಿ ವಿತರಿಸಲಾಗುತ್ತಿದೆ. ದಾನಿಗಳ ಸಂಖ್ಯೆ ಪ್ರತಿವರ್ಷವೂ ಹೆಚ್ಚಾಗುತ್ತಿದೆ. ದಿವ್ಯತ್ರಯರ ಕೃಪೆಯಿಂದ ಸೇವಾಶ್ರಮವು ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲಿ ಎಂಬುದು ಎಲ್ಲರ ಹಾರೈಕೆಯಾಗಲಿ.


*With Best Compliments From :*

**Dr. N. Chandrashekhar**
Managing Partner

# AADITHYA ADHIKARI HOSPITAL

**Contour Road, Gokulam, Mysore – 570002**
**Tele : 2512532, 2513532, Mobile : 9900451766**

**50 Beded Multi-Speciality Hospital extends the following Specialised service Round the Clock**

+ Cardiology, Diabetology + General Medicine, General Surgery + ENT, Opthalmology, Dental + Obstetrics & Gynaecology, Pediatrics + Labour Theatre, Neonatal Care Unit + Orthopaedics, Urology, Nephrology, Neurology + Nutrition & Dietics, Physiotheraphy, Radiology + Well Equipped Minor & Major O.T. + C-ARM & Laparscopic Surgeries + ICU, ICCU, Ventilator + Ultrasound Scanning, ECG, G.I. Endoscopy + Pulmonary Function Test available + 24 hours X-ray, Pathology, Pharmacy, Ambulance Service & Canteen services are available.